ಇಂದು ದಿನಾಂಕಃ 09.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ವಾದಿಯ ಪರ ಶ್ರೀ ಎಸ್ ಆರ್ ಎ ವಕೀಲರಿಂದಃ

ನಾನು ಹಾಜರಪಡಿಸಿರುವಂತಹ ಖರೀದಿ ಪತ್ರ ಖೊಟ್ಟಿಯಾಗಿದ್ದು ಅದಕ್ಕೆ ಕಾನೂನಿನ್ನಿಂದ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದಂತಹ ಸಂದರ್ಭದಲ್ಲಿ ದಾವಾ ಆಸ್ತಿಯು ವಾದಿಯ ಗಂಡನಾದ ಚಿಕ್ಕಪ್ಪನ ಹೆಸರಿನಲ್ಲಿ ಕಾನೂನುಬದ್ದವಾಗಿ ನಮೂದಾಗಿರಲಿಲ್ಲ ಎಂದರೆ ಸರಿಯಲ್ಲ. ವಾದಿಯಾಗಲೀ ಅಥವಾ ವಾದಿಯ ಮಕ್ಕಳಾಗಲೀ ಆಕೆಯ ಗಂಡನ ಹೆಸರಿಗೆ ಕಾನೂನುಬದ್ದವಾಗಿ ದಾವಾ ಆಸ್ತಿಯನ್ನು ಹಸ್ತಾಂತರಿಸಿರುವುದಿಲ್ಲ ಆದರೂ ಕೂಡ ನಾನು ಮತ್ತು ವಾದಿಯ ಗಂಡ ಸೇರಿ ಖೊಟ್ಟಿಯಾಗಿ ಖಾತೆ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ನಾನು ಖರೀದಿ ಮಾಡಿದಂತಹ ಸಂದರ್ಭದಲ್ಲಿ ವಾದಿಯ ಮಕ್ಕಳು ಅಲ್ಪ ವಯಸ್ಕರಾಗಿರುವ ಕಾರಣದಿಂದ ಅವರ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಆ ರೀತಿ ಅಲ್ಪ ವಯಸ್ಕರ ಬಗ್ಗೆ ಮಾಹಿತಿಯನ್ನು ಕ್ರಯ ಪತ್ರದಲ್ಲಿ ನಮೂದಿಸಲು ತೊಂದರೆ ಇತ್ತಾ ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ತೊಂದರೆ ಏನೂ ಇರಲಿಲ್ಲ ಆ ರೀತಿ ಬರೆಸಿಕೊಳ್ಳಬೇಕೆಂಬ ಜ್ಞಾನ ನನಗೆ ಇರಲಿಲ್ಲ ಎಂದು ನುಡಿದಿರುತ್ತಾರೆ.

2. ನಾನು ಖರೀದಿ ಮಾಡುವ ಸಂದರ್ಬದಲ್ಲಿ ಆರ್ ಟಿ ಸಿ ಯಲ್ಲಿ ಗುಡ್ಡಪ್ಪ ತಂದೆ ಚಿಕ್ಕಪ್ಪ ಅಸದಾರ ತಾಯಿ ಎಂದು ನಮೂದಿಸಲಾಗಿದ್ದು ಆ ಬಗ್ಗೆ ನ್ಯಾಯಾಲಯದಿಂದ ಅನುಮತಿಯನ್ನು ಪಡೆಯದೇ ಅಪ್ರಾಪ್ತ ವಯಸ್ಕನ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ಗಂಡ ಕುಡುಕನಿದಿದ್ದು ಆತನಿಂದ ಕಾನೂನು ಬಾಹಿರವಾಗಿ ನಾನು ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ನಂತರ ಬಂದಂತಹ ಡ ನಂಬರುಗಳು ಕಾನೂನು ಬಾಹಿರವಾಗಿರುತ್ತವೆ ಎಂದರೆ ಸರಿಯಲ್ಲ.

3. ನಾನು ವಾದಿಯ ಗಂಡನಿಂದ ಮಾಡಿಕೊಂಡಿರುವಂತಹ ಖರೀದಿ ಪತ್ರಗಳು ಕಾನೂನಿನ ಪ್ರಕಾರ ಮಾನ್ಯತೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರಗಳು ರದ್ದು ಬಾತಲ್ ಇರುತ್ತದೆ ಎಂದರೆ ಸರಿಯಲ್ಲ. 1973 ರಿಂದ ಜಮೀನನ್ನು ನಾವೇ ವಹಿವಾಟು ಮಾಡಿಕೊಂಡು ಹೋಗುತ್ತಿದ್ದೇವೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ವಾದಿಯರು ಯಾವುದೇ ತಕರಾರು ಮಾಡಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯರೇ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ಕೂಡ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರ ವಾದಿಯರಿಗೆ

ಗೊತ್ತಾದ ತಕ್ಷಣ ಅವರು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಕೇವಲ ತೋರುಗಾಣಿಕೆಗಾಗಿ ಖರೀದಿ ಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು ವಿಬಾಗ ಮಾಡಿಕೊಂಡಿರುವುದು ಹಾಗೂ ಸ್ವಲ್ಪ ಬಾಗವನ್ನು 5ನೇ ಪರತಿವಾದಿಗೆ ಮಾರಾಟ ಮಾಡಿರುವುದು ಎಲ್ಲವೂ ವಾದಿಯರಿಗೆ ಮೋಸ ಮಾಡುವುದು ಸೃಷ್ಟಿಸಿಕೊಂಡ ವಿಚಾರಗಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.